**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ,**

**ಇವರ ಕಛೇರಿ ಪ್ರಕಟಣೆ ಅಧಿಸೂಚನೆ ಸಂಖ್ಯೆ: ಆಡಳಿತ 02/2017, ದಿನಾಂಕ: 13-10-2017.**

**ವಿಷಯ:** ದಾವಣಗೆರೆ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಖಾಲಿ ಇರುವ ಜವಾನ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:**
1) ಗೌ. ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II 128/2012, ದಿ: 02-08-2017.
2) ಸರ್ಕಾರಿ ಆದೇಶ ಸಂಖ್ಯೆ: LAW 137 LCE 2014 ದಿ: 28-03-2016.
3) ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳ) (ನೇಮಕಾತಿ) ನಿಯಮಗಳು, 1982.
4) ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2007.
5) ಈ ಕಛೇರಿ ಟಿಪ್ಪಣಿ ಮತ್ತು ಅದರ ಮೇಲಿನ ಆದೇಶ.

************

ದಾವಣಗೆರೆ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಖಾಲಿ ಇರುವ ಜವಾನ (Peon) ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ದಾವಣಗೆರೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ವೆಬ್‌ಸೈಟ್ **http://ecourts.gov.in/davangere/online-recruitment** ನಲ್ಲಿ ನೀಡಲಾದ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ದಿನಾಂಕ: 16-10-2017 ರಿಂದ 13-11-2017 ರ ರಾತ್ರಿ.11.59 ರ ರವರೆಗೆ ಮಾತ್ರ ಸಲ್ಲಿಸತಕ್ಕದ್ದು.

**ಅಭ್ಯರ್ಥಿಗಳು ಅರ್ಜಿಯಲ್ಲಿ ತಮ್ಮ ಚಾಲ್ತಿಯಲ್ಲಿರುವ ದೂರವಾಣಿ ಸಂಖ್ಯೆ ಮತ್ತು ಇಮೇಲ್ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಬೇಕು.**

1. ಹುದ್ದೆಗಳ ಸಂಖ್ಯೆ **: 15**
2. ವೇತನ ಶ್ರೇಣಿ: ರೂ. 9600-200-12000-250-13000-300-14200-350-14550 ಮತ್ತು ಇತರೆ ಭತ್ಯೆಗಳು.

## ಹುದ್ದೆಗಳ ವರ್ಗೀಕರಣ ::

| ಕ್ರ. ಸಂ. | ಹುದ್ದೆ | ಹುದ್ದೆಗಳ ಸಂಖ್ಯೆ: | ಮೀಸಲಾತಿ | ಹುದ್ದೆಗಳ ವರ್ಗೀಕರಣ | | | | | | | ಒಟ್ಟು |
|---|---|---|---|---|---|---|---|---|---|---|---|
| | | | | ಸಾ.ಅ. | ಪ.ಜಾ. | ಪ.ಪಂ. | ಪ್ರ-1 | 2ಎ | 2ಬಿ | 3ಬಿ | |
| 1 | ಜವಾನ | 15 | ಇತರೆ | 1 | 1 | | | 1 | | - | 3 |
| | | | ಮಹಿಳೆ | 2 | | | | | | - | 2 |
| | | | ಗ್ರಾಮೀಣ | 2 | | 1 | 1 | | 1 | 1 | 6 |
| | | | ಮಾ.ಸೈ. | 1 | 1 | | | 1 | | | 3 |
| | | | ಕ.ಮಾ. | 1 | | | | | | | 1 |
| ಒಟ್ಟು | | | | 7 | 2 | 1 | 1 | 2 | 1 | 1 | 15 |

ಸಾ.ಅ. - ಸಾಮಾನ್ಯ ಆರ್ಹತೆ, ಪ.ಜಾ. - ಪರಿಶಿಷ್ಟ ಜಾತಿ, ಮಾ.ಸೈ.-ಮಾಜಿ ಸೈನಿಕ, ಕ.ಮಾ – ಕನ್ನಡ ಮಾಧ್ಯಮ, ಪ.ಪಂ. - ಪರಿಶಿಷ್ಟ ಪಂಗಡ.

ಒಂದು ವೇಳೆ ಅಧಿಸೂಚನೆಯಲ್ಲಿ ನಮೂದಿಸಿದ ವರ್ಗೀಕರಣಕ್ಕನುಸಾರವಾಗಿ ಅರ್ಹ ಮಹಿಳೆ, ಅಂಗವಿಕಲ, ಗ್ರಾಮೀಣ, ಕನ್ನಡ ಮಾಧ್ಯಮ, ಯೋಜನಾ ನಿರಾಶ್ರಿತ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಆ ಸ್ಥಾನಗಳಿಗೆ ಅದೇ ವರ್ಗದ ಅರ್ಹ ಇತರೆ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು.

## ಟಿಪ್ಪಣಿ:

ಈ ಮೇಲಿನ ಹುದ್ದೆಗಳ ವರ್ಗೀಕರಣವನ್ನು ಈ ಕೆಳಗಿನ ಸರ್ಕಾರಿ ಆದೇಶಗಳನ್ನು ಅಧರಿಸಿ ವರ್ಗೀಕರಿಸಲಾಗಿದೆ.

1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 08 ಸೇನೆನಿ 95 ದಿನಾಂಕ: 20-06-1995.
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 53 ಸೇನೆನಿ 2007 ದಿನಾಂಕ: 04-01-2008.
3) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 128 ಸೇನೆನಿ 2006 ದಿನಾಂಕ: 01-08-2009.

## ವಯೋಮಿತಿ:

ಕನಿಷ್ಠ :- 18 ವರ್ಷಗಳು

ಗರಿಷ್ಠ :-
1. ಸಾಮಾನ್ಯ ವರ್ಗ : 35 ವರ್ಷ
2. 2-ಎ, 2-ಬಿ, 3-ಬಿ : 38 ವರ್ಷ
3. ಪ.ಜಾ./ಪ.ಪಂ./ಪ್ರವರ್ಗ-1 : 40 ವರ್ಷ